ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಹಾಸ | ಪ್ರಾಸಾಃ 9 |
| ತಂದೆಯ ಹೆಸರು | : | ಚಿನ್ನಪ್ಪ ಕೆ.ಎಸ್ | ಚಾಸಾಃ 20 |
| ಪ್ರಾಯ | : | 47 ವರ್ಷ | **ದಿನಾಂಕಃ 23.07.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಮೆಸ್ಕಾಂ ಉಡುಪಿ | |
| ವಾಸಸ್ಥಳ | : | ಉಡುಪಿ | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು 2014 ರಿಂದ 2024 ರವೆರೆಗೆ ಕಿನ್ನಿಗೋಳಿಯ ಮೆಸ್ಕಾಂ ಶಾಖಾ ಕಚೇರಿಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಬಜ್ಪೆ ಪೋಲಿಸ್ ಠಾಣೆಯವರು ದಿನಾಂಕ 20.12.2022 ರ ಪತ್ರದಲ್ಲಿ ಪೋಲಿಸ್ ನಿರೀಕ್ಷಕರು ಅಪರಾಧ ಕ್ರಮಾಂಕ 143/2022 ಕ್ಕೆ ಸಂಬಂದಪಟ್ಟಂತೆ ದಿನಾಂಕ 27.11.2022 ರಂದು ಕಿನ್ನಿಗೋಳಿ ಶಾಖಾ ವ್ಯಾಪ್ತಿಯ ತೆಂಕ ಎಕ್ಕಾರು ಗ್ರಾಮದ ಪಲ್ಲದ ಕೋಡಿ ಪ್ರದೇಶದಲ್ಲಿ ರಾತ್ರಿ 8 ಗಂಟೆಯಿಂದ 9.00 ಗಂಟೆಯವರೆಗೆ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ಕೋರಿದ್ದು, ಅದರಂತೆ ನಾನು ಈ ಬಗ್ಗೆ ಬಜ್ಪೆ 220/110/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ವಿಚಾರಿಸಿದಾಗ ಅವರು ಅವರ ಬಳಿ ಇದ್ದ ಲಾಗ್ ಬುಕ್ ನ್ನು ಪರಿಶೀಲಿಸಿ, ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದಲ್ಲಿ ಸದರಿ ಪ್ರದೇಶದಲ್ಲಿ ವಿದ್ಯುತ್ ಸರಬರಾಜು ಆಗುವ 11 KV ಕಟೀಲು ಟೆಂಪಲ್ ಫೀಡರ್ ಚಾಲನೆಯಲ್ಲಿದ್ದು 63 ಕೆವಿಎ ದುರ್ಗಾ ನಗರ ಪರಿವರ್ತಕರಿಂದ ವಿದ್ಯುತ್ ವ್ಯತ್ಯಯದ ಬಗ್ಗೆ ಯಾವುದೇ ದೂರು ಈ

ಪ್ರದೇಶದಿಂದ ನೋಂದಣಿ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ದಿನಾಂಕ 17.01.2023 ರಂದು ಲಿಖಿತ ಮಾಹಿತಿಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ</u>**-

ಘಟನೆ ನಡೆದ 7 ತಿಂಗಳ ನಂತರ ನಾನು ದಾಖಲೆಯನ್ನು ನೀಡಿರುತ್ತೇನೆ. ಸದರಿ ಪ್ರದೇಶದಿಂದ ಯಾವುದೇ ದೂರು ದಾಖಲಾಗಿರುವುದಿಲ್ಲ ಎಂದು ಹೇಳಿದ್ದು, ದೂರನ್ನು ಆ ಪ್ರದೇಶದ ಜನರು ನೀಡುತ್ತಾರೆ. ಪಲ್ಲದಕೋಡಿ ಪ್ರದೇಶಕ್ಕೆ ಮೆಸ್ಕಾಂ ಲೈನ್ ಹೋಗುವುದಿಲ್ಲ ಎಂದರೆ ಸರಿಯಲ್ಲ. ಆ ಪ್ರದೇಶದ ಯಾವುದೇ ಮನೆಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದರೆ ಸರಿಯಲ್ಲ. ವಿದ್ಯುತ್ ವ್ಯತ್ಯಯದ ನಂತರ ಕೂಡಲೇ ಎಲ್ಲರೂ ದೂರು ದಾಖಲು ಮಾಡುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸದರಿ ವಿದ್ಯುತ್ ಲೈನ್ ಕೆಲವು ಕಡೆ ಆನ್ ಮತ್ತು ಕೆಲವು ಕಡೆ ಆಫ್ ಇರುತ್ತದೆ ಎಂದರೆ ಸರಿ. ನಾನು ನಿಪಿ-10 ನ್ನು ಪೋಲಿಸರ ಹೇಳಿಕೆಯ ಮೇರೆಗೆ ಸುಳ್ಳಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪಲ್ಲದಕೋಡಿಯಲ್ಲಿ ವಿದ್ಯುತ್ ಸರಬರಾಜು ಇಲ್ಲದಿದ್ದರೂ ಸುಳ್ಳು ದಾಖಲೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.